**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**

**ಕೆ.ಆರ್.ನಗರ .**

**ಸಿ.ಸಿ ನಂಃ 121/ 2024**

| | | |
|---|---|---|
| **ಸಾಕ್ಷಿಯ ಹೆಸರುಃ** | **ಸುರೇಶ** | **ಫ್ರಾಸಾಃ 1** |
| **ತಂದೆ ಹೆಸರುಃ** | **ದೊಡ್ಡೇಗೌಡ** | **ಚಾಸಾಃ 1** |
| **ವಯಸ್ಸುಃ** | **49 ವರ್ಷ** | **ದಿಃ 04-10-2025** |
| **ಉದ್ಯೋಗಃ** | **ವ್ಯವಸಾಯ** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ಅಂಕನಹಳ್ಳಿ ಕೊಪ್ಪಲು ಗ್ರಾಮ** | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಮೃತ ರವಿ ಬಿನ್ ಕಿಕ್ಕೇರಿಗೌಡ ನನ್ನ ದೊಡ್ಡಪ್ಪನ ಮಗ. ಚಾಸಾ-5 ಮೃತ ರವಿರವರ ಹೆಂಡತಿ. ನನಗೆ ಚಾಸಾಃ2 ರಿಂದ 10 ರವರು ನನ್ನ ಸಂಬಂಧಿಕರು. ನನಗೆ ಆರೋಪಿಯ ಪರಿಚಯವಿಲ್ಲ. ಮೃತ ರವಿ ಬಿನ್ ಕಿಕ್ಕೇರಿಗೌಡರವರು ದಿಃ 21.11.2023 ರಂದು ಸಂಜೆ 4.45 ಗಂಟೆಗೆ ಆದ ರಸ್ತೆ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. ಸದರಿ ಅಪಘಾತ ಯಾವ ರೀತಿ ಆಗಿದೆ ಮತ್ತು ಯಾರ ನಿರ್ಲಕ್ಷತನದಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಆರೋಪಿತರ ಪರಿಚಯ ನನಗೆ ಇರುವುದಿಲ್ಲ.ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ. ನಾನು ಆರೋಪಿಯ ವಿರುದ್ಧ ಪೋಲಿಸರಿಗೆ ದೂರನ್ನು ನೀಡಿರುವುದಿಲ್ಲ.

**( ಈ ಹಂತದಲ್ಲಿ ಮಾನ್ಯ ಹಿ.ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು – ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ**

ದಿಃ 21.11.2023 ರಂದು ಸಂಜೆ 4.45 ಗಂಟೆಗೆ ರವಿ ಬಿನ್ ಕಿಕ್ಕೇರಿಗೌಡರವರು ತಮ್ಮ ಮೋಟಾರ್ ಸೈಕಲ್ ಸಂಖ್ಯೆ ಕೆಎ-09-ಜೆಎ-7154 ರಲ್ಲಿ ತಮ್ಮ ಕೆಲಸದ ನಿಮಿತ್ತ ಹೊಸ

ಕೋಟಿಕೊಪ್ಪಲು ಗ್ರಾಮದಿಂದ ಕುಪ್ಪೆ ಮುದ್ದನಹಳ್ಳಿ ಗ್ರಾಮದ ಮಾರ್ಗವಾಗಿ ಅಂಕನಹಳ್ಳಿ ಕೊಪ್ಪಲು ಗ್ರಾಮಕ್ಕೆ ವಾಪಸ್ಸು ಬರುತ್ತಿದ್ದಾಗ ಹೊಸೂರು–ಹೊಸಕೋಟೆ ಕೊಪ್ಪಲು ರಸ್ತೆಯ ಚಿಬುಕಹಳ್ಳಿ ಮಣ್ಣಿನ ರಸ್ತೆಯ ವಾಟರ್ ಟ್ಯಾಂಕ್‌ನ ಟಾರು ರಸ್ತೆಯ ಬಳಿ ಬೈಕಿನಲ್ಲಿ ರವಿರವರು ಹೋಗುತ್ತಿದ್ದಾಗ ಎದುರುಗಡೆಯಿಂದ ಆರೋಪಿಯು ತನ್ನ ಕೆಎ–45–ಎಮ್–4382 ಕಾರನ್ನು ಅತಿವೇಗ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು ರವಿ ಬಿನ್ ಕಿಕ್ಕೇರಿಗೌಡರವರು ಹೋಗುತ್ತಿದ್ದ ಮೋಟಾರ್ ಸೈಕಲ್ ಸಂಖ್ಯೆ ಕೆಎ–09–ಜೆಎ–7154 ನೇದಕ್ಕೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದ ಪರಿಣಾಮ ರವಿ ಬಿನ್ ಕಿಕ್ಕೇರಿಗೌಡರವರು ತಮ್ಮ ಮೋಟಾರ್ ಸೈಕಲ್ ಸಮೇತ ಕೆಳಗೆ ಬಿದ್ದಿದ್ದು ಅವರಿಗೆ ತಲೆಗೆ ಹಾಗೂ ಮೈಕೈಗೆ ತೀವ್ರವಾದ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದಿಂದಾದ ತೀವ್ರ ಸ್ವರೂಪದ ಗಾಯದಿಂದ ರಕ್ತಸ್ರಾವವಾಗಿ ರವಿ ಬಿನ್ ಕಿಕ್ಕೇರಿಗೌಡರವರು ಅಪಘಾತ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ತಕ್ಷಣ ಚಾಸಾ–2 ರಿಂದ 4 ರವರು ಅಪಘಾತ ಸ್ಥಳಕ್ಕೆ ಹೋಗಿ ರವಿರವರನ್ನು ಸುಧಾರಿಸಲು ಪ್ರಯತ್ನಪಟ್ಟರು ಸಹ ಫಲಕಾರಿಯಾಗದೇ ರಸ್ತೆ ಅಪಘಾತದಿಂದ ಆದ ಗಾಯಗಳಿಂದ ರವಿ ಬಿನ್ ಕಿಕ್ಕೇರಿಗೌಡರವರು ಅಪಘಾತ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನನಗೆ ಚಾಸಾ-2 ರವರು ಪೋನ್ ಮುಖಾಂತರ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಘಟನೆಯ ಬಗ್ಗೆ ನಾನು ಪೋಲಿಸ ಠಾಣೆಯಲ್ಲಿ ಆರೋಪಿತರ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ತಾನು ನೀಡಿದ ದೂರನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಎಂದು, ಹಾಗೂ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಪೋಲಿಸರ ಹೇಳಿಕೆಯ ಮೇರೆಗೆ ತಾನು ನಿಪಿ–1 ರಲ್ಲಿ ತನ್ನ ಸಹಿಯನ್ನು ಹಾಕಿರುತ್ತೇನೆ ಎಂದು ಹಾಗೂ ನಿಪಿ–1 ರಲ್ಲಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಅಪಘಾತವು ಆರೋಪಿಯ ನಿರ್ಲಕ್ಷತನದಿಂದ ಆಗಿದೆ ಎಂದು ಗೊತ್ತಿದ್ದರೂ ಸಹ ಆರೋಪಿಯೊಜಂದಿಗೆ ರಾಜಿಯಾಗಿ ಆರೋಪಿಗೆ ಸಹಾಯ ಮಾಡಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿತರ ಪರ ವಕೀಲರವರಿಂದಃ</u>**

ತಮ್ಮ ಪರ ಯಾವುದೆ ಪಾಟೀ ಸವಾಲು ಇಲ್ಲ ಎಂದು ಆರೋಪಿಪರ ವಕೀಲರು ಹೇಳಿರುತ್ತಾರೆ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**

**ಕೆ.ಆರ್.ನಗರ .**

**ಸಿ.ಸಿ ನಂಃ 121/ 2024**

| | | |
|---|---|---|
| **ಸಾಕ್ಷಿಯ ಹೆಸರುಃ** | **ಮಹದೇವ** | **ಫ್ರಾಸಾಃ 2** |
| **ತಂದೆ ಹೆಸರುಃ** | **ತಮ್ಮೇಗೌಡ** | **ಚಾಸಾಃ 2** |
| **ವಯಸ್ಸುಃ** | **44 ವರ್ಷ** | **ದಿಃ 04-10-2025** |
| **ಉದ್ಯೋಗಃ** | **ಕೂಲಿ ಕೆಲಸ** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ಹೊಸಕೋಟೆ ಕೊಪ್ಪಲು ಗ್ರಾಮ** | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಮೃತ ರವಿ ಬಿನ್ ಕಿಕ್ಕೇರಿಗೌಡ ನನ್ನ ಭಾವ. ಚಾಸಾ-5 ನನ್ನ ಅಕ್ಕ. ನನಗೆ ಚಾಸಾಃ2 ರಿಂದ 10 ರವರು ನನ್ನ ಸಂಬಂಧಿಕರು. ನನಗೆ ಆರೋಪಿಯ ಪರಿಚಯವಿಲ್ಲ. ಮೃತ ರವಿ ಬಿನ್ ಕಿಕ್ಕೇರಿಗೌಡರವರು ದಿಃ 21.11.2023 ರಂದು ಸಂಜೆ 4.45 ಗಂಟೆಗೆ ಆದ ರಸ್ತೆ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. ಸದರಿ ಅಪಘಾತ ಯಾವ ರೀತಿ ಆಗಿದೆ ಮತ್ತು ಯಾರ ನಿರ್ಲಕ್ಷತನದಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಆರೋಪಿತರ ಪರಿಚಯ ನನಗೆ ಇರುವುದಿಲ್ಲ.ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ. ನಾನು ಆರೋಪಿಯ ವಿರುದ್ಧ ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**( ಈ ಹಂತದಲ್ಲಿ ಮಾನ್ಯ ಹಿ.ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು – ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ**

ದಿಃ 21.11.2023 ರಂದು ಸಂಜೆ 4.45 ಗಂಟೆಗೆ ರವಿ ಬಿನ್ ಕಿಕ್ಕೇರಿಗೌಡರವರು ತಮ್ಮ ಮೋಟಾರ್ ಸೈಕಲ್ ಸಂಖ್ಯೆ ಕೆಎ-09-ಜೆಎ-7154 ರಲ್ಲಿ ತಮ್ಮ ಕೆಲಸದ ನಿಮಿತ್ತ ಹೊಸ ಕೋಟೆಕೊಪ್ಪಲು ಗ್ರಾಮದಿಂದ ಕುಪ್ಪೆ ಮುದ್ದನಹಳ್ಳಿ ಗ್ರಾಮದ ಮಾರ್ಗವಾಗಿ ಅಂಕನಹಳ್ಳಿ ಕೊಪ್ಪಲು ಗ್ರಾಮಕ್ಕೆ ವಾಪಸ್ಸು ಬರುತ್ತಿದ್ದಾಗ ಹೊಸೂರು-ಹೊಸಕೋಟೆ ಕೊಪ್ಪಲು ರಸ್ತೆಯ ಚಿಬುಕಹಳ್ಳಿ ಮಣ್ಣಿನ ರಸ್ತೆಯ ವಾಟರ್ ಟ್ಯಾಂಕ್‌ನ ಟಾರು ರಸ್ತೆಯ ಬಳಿ ಬೈಕಿನಲ್ಲಿ ರವಿರವರು ಹೋಗುತ್ತಿದ್ದಾಗ ಎದುರುಗಡೆಯಿಂದ ಆರೋಪಿಯು ತನ್ನ ಕೆಎ-45-ಎಮ್-4382 ಕಾರನ್ನು ಅತಿವೇಗ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು ರವಿ ಬಿನ್ ಕಿಕ್ಕೇರಿಗೌಡರವರು ಹೋಗುತ್ತಿದ್ದ ಮೋಟಾರ್ ಸೈಕಲ್ ಸಂಖ್ಯೆ ಕೆಎ-09-ಜೆಎ-7154 ನೇದಕ್ಕೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದ ಪರಿಣಾಮ ರವಿ ಬಿನ್ ಕಿಕ್ಕೇರಿಗೌಡರವರು ತಮ್ಮ ಮೋಟಾರ್ ಸೈಕಲ್ ಸಮೇತ ಕೆಳಗೆ ಬಿದ್ದಿದ್ದು ಅವರಿಗೆ ತಲೆಗೆ ಹಾಗೂ ಮೈಕೈಗೆ ತೀವ್ರವಾದ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದಿಂದಾದ ತೀವ್ರ ಸ್ವರೂಪದ ಗಾಯದಿಂದ ರಕ್ತಸ್ರಾವವಾಗಿ ರವಿ ಬಿನ್ ಕಿಕ್ಕೇರಿಗೌಡರವರು ಅಪಘಾತ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ತಕ್ಷಣ ನಾನು ಹಾಗೂ ಚಾಸಾ-3 ಮತ್ತು 4 ರವರು ಅಪಘಾತ ಸ್ಥಳಕ್ಕೆ ಹೋಗಿ ರವಿರವರನ್ನು ಸುಧಾರಿಸಲು ಪ್ರಯತ್ನಪಟ್ಟರು ಸಹ ಫಲಕಾರಿಯಾಗದೇ ರಸ್ತೆ ಅಪಘಾತದಿಂದ ಆದ ಗಾಯಗಳಿಂದ ರವಿ ಬಿನ್ ಕಿಕ್ಕೇರಿಗೌಡರವರು ಅಪಘಾತ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನಾನು ಚಾಸಾ-1 ರವರಿಗೆ ಪೋನ್ ಮುಖಾಂತರ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಘಟನೆಯ ಸಂಬಂಧ ನಾನು ಆರೋಪಿತರ ವಿರುದ್ಧ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ತಾನು ನೀಡಿದ ಹೇಳಿಕೆಯನ್ನು ಓದಿ ಹೇಳಲಾಗಿ ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗಳೆದಿರುವುದರಿಂದ ಸಾಕ್ಷಿಯ ಹೇಳಿಕೆಯನ್ನು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ದಿಃ 22.11.2023 ರಂದು ಸಂಜೆ 5.15 ರಿಂದ 6.20 ಗಂಟೆಯವರೆಗೆ ನಾನು ತೋರಿಸಿ ಕೊಟ್ಟ ಮೇರೆಗೆ ನನ್ನ ಹಾಗೂ ಚಾಸಾ-11 ಮತ್ತು 12 ರವರ ಸಮಕ್ಷಮದಲ್ಲಿ ಪೋಲಿಸರು ಈ ಪ್ರಕರಣದ ಘಟನಾ ಸ್ಥಳದ ಪಂಚನಾಮೆ ಮಾಡಿ ಅಪಘಾತಪಡಿಸಿದ ಮತ್ತು ಅಪಘಾತಕ್ಕೀಡಾದ ವಾಹನಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ತಾನು ಸ್ಥಳ ಮಹಜರನ್ನು ಮತ್ತು ಸ್ಥಳ ನಕಾಶೆಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಮತ್ತು ನಿಪಿ.4 ಎಂದು, ಹಾಗೂ ಸಾಕ್ಷಿಯ ಸಹಿಯನ್ನು ನೋಡಿ

ಗುರುತಿಸಿದ್ದರಿಂದ ಅದನ್ನು ನಿಪಿ–3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಪೋಲಿಸರ ಹೇಳಿಕೆಯ ಮೇರೆಗೆ ತಾನು ನಿಪಿ–3 ಮತ್ತು 4 ರಲ್ಲಿ ತನ್ನ ಸಹಿಯನ್ನು ಹಾಕಿರುತ್ತೇನೆ ಎಂದು ಹಾಗೂ  ನಿಪಿ–3 ಮತ್ತು 4 ರಲ್ಲಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಈಗ ಒಂದು ಪೋಟೋವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋವನ್ನು ನಿಪಿ–5 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಪೋಲಿಸರ ಹೇಳಿಕೆಯ ಮೇರೆಗೆ ಸದರಿ ಪೋಟೋಕ್ಕೆ ನಿಂತಿರುತ್ತೇನೆ.  ಪೋಲಿಸರು ಸದರಿ ಪೋಟೋವನ್ನು ಯಾಕೆ ತೆಗೆದಿರುತ್ತಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಅಪಘಾಕ್ಕೀಡಾದ ಮೋಟಾರ್ ಸೈಕಲ್ ಸಂಖ್ಯೆ ಕೆಎ–09–ಜೆಎ–7154 ರ ಪೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.6 ಮತ್ತು 7 ಎಂದು ಗುರುತಿಸಲಾಯಿತು.

ಅಪಘಾತವು ಆರೋಪಿಯ ನಿರ್ಲಕ್ಷತನದಿಂದ ಆಗಿದೆ ಎಂದು ಗೊತ್ತಿದ್ದರೂ ಸಹ ಆರೋಪಿಯೊಜಂದಿಗೆ ರಾಜಿಯಾಗಿ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿತರ ಪರ ವಕೀಲರವರಿಂದಃ</u>**

ತಮ್ಮ ಪರ ಯಾವುದೆ ಪಾಟೀ ಸವಾಲು ಇಲ್ಲ ಎಂದು ಆರೋಪಿಪರ ವಕೀಲರು ಹೇಳಿರುತ್ತಾರೆ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

1 ನೇ ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು

ಕೆ.ಆರ್.ನಗರ